# ಕನ್ನಡ ವಿಶ್ವವಿದ್ಯಾಲಯ, ಹಂಪಿ
## ಅಭಿವೃದ್ಧಿ ಅಧ್ಯಯನ ವಿಭಾಗ

# ಜಾತಿ ಮತ್ತು ಸಮಕಾಲೀನ ರಾಜಕೀಯ
### ವಿಶೇಷ ಉಪನ್ಯಾಸ – 28.02.2024

## ಪ್ರಬಲ ಜಾತಿಗಳಿಗೆ ಅಧಿಕಾರ ದೊರೆಯುವುದರಿಂದ ಸಾಮಾಜಿಕ ನ್ಯಾಯದ ಸವಕಳಿಯಾಗಿದೆ :
**– ಅಸಾಂಗ್ ವಾಂಖೇಡ್**




ಜಾತಿ ಮತ್ತು ರಾಜಕೀಯ ವ್ಯವಸ್ಥೆಗಳ ಸಂಬಂಧ ಇಂದು ನಿನ್ನೆಯದಲ್ಲ. ಕೆಳವರ್ಗದವರು ರಾಜಕೀಯ ಮುನ್ನಲೆಗೆ ಬಂದಾಗ ಸಮಾಜವು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ ಎಂದು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಒ.ಯು.ಸಿ. ಎಲ್.ಜೆ.ಯ ಸಂಪಾದಕರಾದ **ಅಸಾಂಗ್ ವಾಂಖೇಡ್** ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ **ಅಭಿವೃದ್ಧಿ ಅಧ್ಯಯನ ವಿಭಾಗ**ದಲ್ಲಿ ದಿನಾಂಕ 28.2.2024ರಂದು ನಡೆದ **ಜಾತಿ ಮತ್ತು ಸಮಕಾಲೀನ ರಾಜಕೀಯ** ವಿಷಯದ ಕುರಿತು ಹಮ್ಮಿಕೊಂಡಿದ್ದ **ವಿಶೇಷ ಉಪನ್ಯಾಸ** ಕಾರ್ಯಕ್ರಮದಲ್ಲಿ ಅವರು ಮಾತನಾಡುತ್ತ ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದ ಮೂಲಕವೇ ರಾಜಕೀಯ ಮೀಸಲಾತಿ ಹಕ್ಕನ್ನು ಒದಗಿಸಿಕೊಟ್ಟಿದ್ದಾರೆ. ಪ್ರಸ್ತುತ ರಾಜಕಾರಣದಲ್ಲಿ ರಾಜಕೀಯ ಹಾಗೂ ಆರ್ಥಿಕವಾಗಿ ಬಲಿಷ್ಠವಾಗಿರುವ ಜಾತಿಗಳು ಮೀಸಲಾತಿಗಾಗಿ ಹೋರಾಟ ನಡೆಸುತ್ತಿದ್ದು, ಇದರ ಸೋಗಿನಲ್ಲಿ ತುಳಿತಕ್ಕೊಳಗಾದ ತಳ ಸಮುದಾಯಗಳು ನಿರ್ಲಕ್ಷ್ಯಕ್ಕೊಳಪಡುತ್ತಿವೆ. ದೇಶದ ಅನೇಕ ರಾಜ್ಯಗಳಲ್ಲಿ ರಾಜಕೀಯ ಅಧಿಕಾರ ಒಂದು ಪಕ್ಷದಿಂದ ಮತ್ತೊಂದು ಪಕ್ಷಕ್ಕೆ ಹಸ್ತಾಂತರವಾಗುತ್ತಿದೆ. ಆದರೆ ಪ್ರಬಲ ಜಾತಿಗಳ ಕೈಗೆ ಅಧಿಕಾರ ಸೇರುತ್ತಿದೆ. ಬಹುತೇಕ ಸಂಧರ್ಭದಲ್ಲಿ ಪಕ್ಷ ಅಥವಾ ವ್ಯಕ್ತಿ ಬದಲಾದರೂ ಜಾತಿ ಬದಲಾಗುವುದಿಲ್ಲ. ಅಧಿಕಾರದ ಲಾಲಾಸೆಯಿಂದ ಪರಕಾಷ್ಠೆ ತಲುಪಿದ ರಾಜ್ಯದ ಹಿತಾಸಕ್ತಿಗಳು ನೈಪತ್ಯಕ್ಕೆ ಸರಿದಿವೆ. ಬಹುತೇಕ ನಾಯಕರು ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಮರೆತು ಜಾತಿ–ಜಾತಿಗಳ ನಡುವೆ ದೋಷರೋಪಣೆ ಮಾಡುವ ಮೂಲಕ ಎತ್ತಿಕಟ್ಟುವ ಕೆಲಸ ಮಾಡುತ್ತಿದ್ದಾರೆ. ಇದರಿಂದ ಸಮಾಜದಲ್ಲಿ ಸಾಮಾಜಿಕ ನ್ಯಾಯ, ಸಮತೆ ಹಾಗೂ ಸಹೋದರತ್ವಕ್ಕೆ ಧಕ್ಕೆಯಾಗಿದೆ. ಈ ಕುರಿತು ಹೊಸ ತಲೆಮಾರಿನವರು ಅಂಬೇಡ್ಕರ್ ಅವರನ್ನು ಮತ್ತಷ್ಟು ಓದುವುದರ ಮೂಲಕ ಅರ್ಥ ಮಾಡಿಕೊಳ್ಳಬೇಕಾಗಿದೆ ಎಂದರು.

ಈ ಸಂದರ್ಭದಲ್ಲಿ ವಿಭಾಗದ ಪ್ರಾಧ್ಯಪಕರಾದ **ಡಾ.ಹೆಚ್.ಡಿ ಪ್ರಶಾಂತ್** ಅವರು ಸ್ವಾಗತಿಸಿ, ಪ್ರಾಸ್ತಾವಿಕವಾಗಿ ಮಾತನಾಡಿದರು. ವಿಭಾಗದ ಪ್ರಾಧ್ಯಾಪಕರಾದ **ಡಾ.ಎ.ಶ್ರೀಧರ್, ಡಾ.ಜನಾರ್ಧನ, ಗೋವರ್ಧನ** ಮತ್ತು ವಿವಿಧ **ನಿಕಾಯಗಳ ಡೀನರು, ಮುಖ್ಯಸ್ಥರು, ಅಧ್ಯಾಪಕರು, ಬೋಧಕೇತರ ಸಿಬ್ಬಂದಿಗಳು, ಸಂಶೋಧನಾ ವಿದ್ಯಾರ್ಥಿಗಳು** ಉಪಸ್ಥಿತರಿದ್ದರು. ಅಭಿವೃದ್ಧಿ ಅಧ್ಯಯನ ವಿಭಾಗದ ಮುಖ್ಯಸ್ಥರಾದ **ಡಾ.ಗೀತಮ್ಮ ಕೆ.** ಅವರು ನಿರೂಪಿಸಿದರು.









ಕನ್ನಡ ವಿಶ್ವವಿದ್ಯಾಲಯದಲ್ಲಿ ಬುಧವಾರ ಏರ್ಪಡಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಆಕ್ಸ್‌ಫರ್ಡ್ ವಿಶ್ವ ವಿದ್ಯಾಲಯದ ಒಯುಸಿ ಎಲ್‌ಜೆಯ ಸಂಪಾದಕ ಅಸಾಂಗ್ ವಾಂಖೇಡ್ ಮಾತನಾಡಿದರು. ವಿಭಾಗದ ಪ್ರಾಧ್ಯಾಪಕ ಡಾ.ಎಚ್.ಡಿ.ಪ್ರಶಾಂತ್, ಪ್ರಾಧ್ಯಾಪಕರಾದ ಡಾ.ಎ.ಶ್ರೀಧರ್, ಡಾ.ಜನಾರ್ದನ, ಗೋವರ್ಧನ, ಡಾ.ಕೆ.ಗೀತಮ್ಮ ಇತರರಿದ್ದರು.

## ತಳ ಸಮುದಾಯಗಳ ನಿರ್ಲಕ್ಷ್ಯ

» ಆಕ್ಸ್‌ಫರ್ಡ್ ವಿವಿಯ ಅಸಾಂಗ್ ವಾಂಖೇಡ್ ಬೇಸರ

**ಹೊಸಪೇಟೆ:** ಕೆಳವರ್ಗದವರು ರಾಜಕೀಯದಲ್ಲಿ ಮುನ್ನೆಲೆಗೆ ಬಂದಾಗ ಸಮಾಜವು ಅಭಿವೃದ್ಧಿ ಹೊಂದಲು ಸಾಧ್ಯ ಎಂದು ಆಕ್ಸ್‌ಫರ್ಡ್ ವಿವಿಯ ಒಯುಸಿ ಎಲ್‌ಜೆಯ ಸಂಪಾದಕ ಅಸಾಂಗ್ ವಾಂಖೇಡ್ ಹೇಳಿದರು.

ಕನ್ನಡ ವಿವಿಯ ಅಭಿವೃದ್ಧಿ ಅಧ್ಯಯನ ವಿಭಾಗದಲ್ಲಿ ಬುಧವಾರ ಏರ್ಪಡಿಸಿದ್ದ 'ಜಾತಿ ಮತ್ತು ಸಮಕಾಲೀನ ರಾಜಕೀಯ' ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಮಾತನಾಡಿದರು. ಡಾ.ಅಂಬೇಡ್ಕರ್ ಅವರು ಸಂವಿಧಾನದ ಮೂಲಕವೇ ರಾಜಕೀಯ ಮೀಸಲಾತಿ ಹಕ್ಕು ಒದಗಿಸಿದ್ದಾರೆ. ಪ್ರಸ್ತುತ ರಾಜಕೀಯ ಹಾಗೂ ಆರ್ಥಿಕವಾಗಿ ಬಲಿಷ್ಠವಾಗಿರುವ ಜಾತಿಗಳು ಮೀಸಲಾತಿಗಾಗಿ ಹೋರಾಟ ನಡೆಸುತ್ತಿದ್ದು, ಇದರ ಸೋಗಿನಲ್ಲಿ ತುಳಿತಕ್ಕೊಳಗಾದ ತಳ ಸಮುದಾಯಗಳು ನಿರ್ಲಕ್ಷ್ಯಕ್ಕೊಳಪಡುತ್ತಿವೆ. ದೇಶದ ಅನೇಕ ರಾಜ್ಯಗಳಲ್ಲಿ ರಾಜಕೀಯ ಅಧಿಕಾರ ಒಂದು ಪಕ್ಷದಿಂದ ಮತ್ತೊಂದು ಪಕ್ಷಕ್ಕೆ ಹಸ್ತಾಂತರವಾಗುತ್ತಿದೆ, ಆದರೆ ಪ್ರಬಲ ಜಾತಿಗಳ ಕೈಗೆ ಅಧಿಕಾರ ಸೇರುತ್ತಿದೆ ಎಂದರು.

ಬಹುತೇಕ ಸಂದರ್ಭದಲ್ಲಿ ಪಕ್ಷ ಅಥವಾ ವ್ಯಕ್ತಿ ಬದಲಾದರೂ ಜಾತಿ ಬದಲಾಗುವುದಿಲ್ಲ. ಹಲವು ನಾಯಕರು ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಮರೆತು ಜಾತಿಗಳ ನಡುವೆ ಸಂಘರ್ಷ ಉಂಟು ಮಾಡುವ ಕೆಲಸ ಮಾಡುತ್ತಿದ್ದಾರೆ. ಹೊಸ ತಲೆಮಾರಿನವರು ಅಂಬೇಡ್ಕರ್ ಅವರನ್ನು ಮತ್ತಷ್ಟು ಓದುವ ಮೂಲಕ ಅರ್ಥ ಮಾಡಿಕೊಳ್ಳಬೇಕಾಗಿದೆ ಎಂದರು.

ವಿಭಾಗದ ಪ್ರಾಧ್ಯಾಪಕ ಡಾ.ಎಚ್.ಡಿ.ಪ್ರಶಾಂತ್ ಮಾತನಾಡಿದರು. ಪ್ರಾಧ್ಯಾಪಕರಾದ ಡಾ.ಎ.ಶ್ರೀಧರ್, ಡಾ.ಜನಾರ್ದನ, ಗೋವರ್ಧನ, ಡಾ.ಕೆ.ಗೀತಮ್ಮ ಇತರರಿದ್ದರು.



## ಕೆಳವರ್ಗದವರು ಅಭಿವೃದ್ಧಿ ಹೊಂದಲಿ

**ವಿಕ ಸುದ್ದಿಲೋಕ** ವಿಜಯನಗರ (ಹೊಸಪೇಟೆ)

ಜಾತಿ ಮತ್ತು ರಾಜಕೀಯ ವ್ಯವಸ್ಥೆಗಳ ಸಂಬಂಧ ಇಂದು ನಿನ್ನೆಯದಲ್ಲ, ಕೆಳವರ್ಗದವರು ರಾಜಕೀಯ ಮುನ್ನೆಲೆಗೆ ಬಂದಾಗ ಸಮಾಜ ಅಭಿವೃದ್ಧಿ ಹೊಂದಲು ಸಾಧ್ಯ ಎಂದು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಒ.ಯು.ಸಿ.ಎಲ್.ಜೆ.ಯ ಸಂಪಾದಕ ಅಸಾಂಗ್ ವಾಂಖೇಡ್ ಅಭಿಪ್ರಾಯಪಟ್ಟರು.

ಕನ್ನಡ ವಿಶ್ವವಿದ್ಯಾಲಯದ ಅಭಿವೃದ್ಧಿ ಅಧ್ಯಯನ ವಿಭಾಗದಲ್ಲಿ ಬುಧವಾರ ನಡೆದ ಜಾತಿ ಮತ್ತು ಸಮಕಾಲೀನ ರಾಜಕೀಯ ವಿಷಯದ ಕುರಿತು ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸದಲ್ಲಿ ಮಾತನಾಡಿದರು.

ಡಾ.ಬಿ.ಆರ್.ಅಂಬೇಡ್ಕರ್ ಅವರು ಸಂವಿಧಾನದ ಮೂಲಕವೇ ರಾಜಕೀಯ ಮೀಸಲಾತಿ ಹಕ್ಕನ್ನು ಒದಗಿಸಿಕೊಟ್ಟಿದ್ದಾರೆ. ಪ್ರಸ್ತುತ ರಾಜಕಾರಣದಲ್ಲಿ ರಾಜಕೀಯ ಹಾಗೂ ಆರ್ಥಿಕವಾಗಿ ಬಲಿಷ್ಠವಾಗಿರುವ ಜಾತಿಗಳು ಮೀಸಲಾತಿಗಾಗಿ ಹೋರಾಟ ನಡೆಸುತ್ತಿದ್ದು, ಇದರ ಸೋಗಿನಲ್ಲಿ ತುಳಿತಕ್ಕೊಳಗಾದ ತಳ ಸಮುದಾಯಗಳು ನಿರ್ಲಕ್ಷ್ಯಕ್ಕೊಳಪಡುತ್ತಿವೆ. ದೇಶದ ಅನೇಕ ರಾಜ್ಯಗಳಲ್ಲಿ ರಾಜಕೀಯ ಅಧಿಕಾರ ಒಂದು ಪಕ್ಷದಿಂದ ಮತ್ತೊಂದು ಪಕ್ಷಕ್ಕೆ ಹಸ್ತಾಂತರವಾಗುತ್ತಿದೆ. ಆದರೆ, ಪ್ರಬಲ ಜಾತಿಗಳ ಕೈಗೆ ಅಧಿಕಾರ ಸೇರುತ್ತಿದೆ. ಬಹುತೇಕ ಸಂದರ್ಭ ಪಕ್ಷ ಅಥವಾ ವ್ಯಕ್ತಿ ಬದಲಾದರೂ ಜಾತಿ ಬದಲಾಗುವುದಿಲ್ಲ, ಅಧಿಕಾರದ ಲಾಲಸೆಯ ಪರಾಕಾಷ್ಠೆ ತಲುಪಿದ ರಾಜ್ಯದ ಹಿತಾಸಕ್ತಿಗಳು ನೇಪಥ್ಯಕ್ಕೆ ಸರಿದಿವೆ ಎಂದರು.

ಬಹುತೇಕ ನಾಯಕರು ಅಂಬೇಡ್ಕರ್ ಅವರ ಸಾಮಾಜಿಕ ನ್ಯಾಯದ ಪರಿಕಲ್ಪನೆಯನ್ನು ಮರೆತು ಜಾತಿ-ಜಾತಿಗಳ ಮಧ್ಯೆ ದೋಷಾರೋಪ ಮಾಡುವ ಮೂಲಕ ಎತ್ತಿಕಟ್ಟುವ ಕೆಲಸ ಮಾಡುತ್ತಿದ್ದಾರೆ. ಇದರಿಂದ ಸಮಾಜದಲ್ಲಿ ಸಾಮಾಜಿಕ ನ್ಯಾಯ, ಸಮತೆ ಹಾಗೂ ಸಹೋದರತ್ವಕ್ಕೆ ಧಕ್ಕೆಯಾಗಿದೆ. ಈ ಕುರಿತು ಹೊಸ ತಲೆಮಾರಿನವರು ಅಂಬೇಡ್ಕರ್ ಅವರನ್ನು ಮತ್ತಷ್ಟು ಓದುವುದರ ಮೂಲಕ ಅರ್ಥ ಮಾಡಿಕೊಳ್ಳಬೇಕಾಗಿದೆ ಎಂದು ತಿಳಿಸಿದರು. ವಿಭಾಗದ ಪ್ರಾಧ್ಯಾಪಕ ಡಾ.ಎಚ್.ಡಿ ಪ್ರಶಾಂತ್ ಪ್ರಾಸ್ತಾವಿಕ ಮಾತನಾಡಿದರು. ಅಭಿವೃದ್ಧಿ ಅಧ್ಯಯನ ವಿಭಾಗದ ಮುಖ್ಯಸ್ಥೆ ಡಾ.ಕೆ.ಗೀತಮ, ಪ್ರಾಧ್ಯಾಪಕ ಡಾ.ಎ.ಶ್ರೀಧರ್, ಡಾ.ಜನಾರ್ದನ, ಗೋವರ್ಧನ ಮತ್ತು ನಾನಾ ನಿಕಾಯಗಳ ಡೀನರು, ಮುಖ್ಯಸ್ಥರು, ಅಧ್ಯಾಪಕರು, ಬೋಧಕೇತರ ಸಿಬ್ಬಂದಿ, ಸಂಶೋಧನಾ ವಿದ್ಯಾರ್ಥಿಗಳು ಇದ್ದರು.

**ಒ.ಯು.ಸಿ.ಎಲ್.ಜೆ.ಯ ಸಂಪಾದಕ ಅಸಾಂಗ್ ವಾಂಖೇಡ್ ಅಭಿಪ್ರಾಯ**

ಕನ್ನಡ ವಿಶ್ವವಿದ್ಯಾಲಯದಲ್ಲಿ ಜಾತಿ ಮತ್ತು ಸಮಕಾಲೀನ ರಾಜಕೀಯ ವಿಷಯದ ಕುರಿತು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಒ.ಯು.ಸಿ.ಎಲ್.ಜೆ ಯ ಸಂಪಾದಕ ಅಸಾಂಗ್ ವಾಂಖೇಡ್ ವಿಶೇಷ ಉಪನ್ಯಾಸ ನೀಡಿದರು.